ಶ್ರೀ ಬಿ. ರಮಾನಾಥ ರೈ:— ಇಲ್ಲದಿದ್ದಲ್ಲಿ ಅದನ್ನು ಸಂಬಂಧಪಟ್ಟ ಸಚಿವರಿಗೆ ಮನದಟ್ಟು ಮಾಡಿಕೊಡುತ್ತೇನೆ.

ರಾಜ್ಯದಲ್ಲಿ ತ್ವರಿತ ನ್ಯಾಯಾಲಯಗಳ ಸ್ಥಾಪನೆ.

252(2080) ಶ್ರೀ ರಾಮಲಿಂಗರೆಡ್ಡಿ (ಜಯನಗರ):— ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ತ್ವರಿತ (ಫಾಸ್ಟ್ ಟ್ರ್ಯಾಕ್ ಕೋರ್ಟ್ಸ್) ನ್ಯಾಯಾಲಯಗಳನ್ನು ಸ್ಥಾಪಿಸಲಾಗಿದೆಯೇ?

ಆ) ಇಲ್ಲದಿದ್ದಲ್ಲಿ ಸುಮಾರು, 10 ವರ್ಷಕ್ಕೂ ಮಿಕ್ಕಿ ಉಳಿದಿರುವ ವಿವಿಧ ಬಗೆಯ ದಾವೆಗಳನ್ನು ಇತ್ಯರ್ಥಗೊಳಿಸಲು ತ್ವರಿತ ನ್ಯಾಯಾಲಯಗಳನ್ನು ರಾಜ್ಯದಲ್ಲಿ ಸ್ಥಾಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):—

ಅ) ಸರ್ಕಾರದ ಆದೇಶ ಸಂಖ್ಯೆ: ಲಾ 369 ಎಲ್‌ಎಎಂ 2000 ದಿನಾಂಕ: 29-5-2001 ರಲ್ಲಿ ರೂ. 1,13,20,000-00 ವೆಚ್ಚದಲ್ಲಿ 13 ಫಾಸ್ಟ್ ಟ್ರ್ಯಾಕ್ಟ್ ನ್ಯಾಯಾಲಯಗಳನ್ನು ರಾಜ್ಯದಲ್ಲಿ ಸ್ಥಾಪಿಸಲು ಸರ್ಕಾರ ಮಂಜೂರಾತಿ ನೀಡಿದೆ. ಈ ಎಲ್ಲಾ ನ್ಯಾಯಾಲಯಗಳು ಸದರಿ ನ್ಯಾಯಾಲಯಗಳಿಗೆ ಗೌರವಾನ್ವಿತ ನ್ಯಾಯಾಧೀಶರುಗಳನ್ನು ನೇಮಕ ಮಾಡಿದ ದಿನಾಂಕದಿಂದ ಕಾರ್ಯನಿರತವಾಗಿರುತ್ತವೆ. ನ್ಯಾಯಾಧೀಶರುಗಳನ್ನು ನೇಮಕ ಮಾಡುವ ಪ್ರಸ್ತಾವನೆಯನ್ನು ಸರ್ಕಾರದ ಪರಿಶೀಲನೆಯ ಹಾಗೂ 150 ಫಾಸ್ಟ್ ಟ್ರ್ಯಾಕ್ಟ್ ನ್ಯಾಯಾಲಯಗಳನ್ನು ಸದರಿ ನ್ಯಾಯಾಲಯಗಳಿಗೆ, ನ್ಯಾಯಾಲಯ ಕಟ್ಟಡಗಳನ್ನು ನಿರ್ಮಿಸಲು ಸ್ಥಳಾವಕಾಶ ದೊರೆಯುವ ಆಧಾರದ ಮೇಲೆ ಹಂತ ಹಂತವಾಗಿ ಸ್ಥಾಪಿಸಲಾಗುವುದು.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ರಾಮಲಿಂಗಾರೆಡ್ಡಿ:— ಮಾನ್ಯ ಸಭಾಧ್ಯಕ್ಷರೇ, ಈಗ 13 ತ್ವರಿತ ನ್ಯಾಯಾಲಯಗಳನ್ನು ಪ್ರಾರಂಭ ಮಾಡುತ್ತೇವೆ ಎಂದು ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಇದಕ್ಕೆ ಕೇಂದ್ರ ಸರ್ಕಾರದಿಂದ ಎಷ್ಟು ಹಣ ಬಂದಿದೆ? ಇನ್ನು 150 ಕೋರ್ಟುಗಳನ್ನು ಮಾಡುತ್ತೇವೆ ಎಂದು ಹೇಳುತ್ತಿದ್ದೀರಲ್ಲಾ, ಇದನ್ನು ಯಾವಾಗ ಮಾಡುತ್ತೀರಿ? ಈಗ ಒಟ್ಟು ಎಷ್ಟು ಕೇಸುಗಳು ಪೆಂಡಿಂಗ್ ಇವೆ? ಈ ಎಲ್ಲಾ ಕೋರ್ಟುಗಳು

ಪ್ರಾರಂಭವಾದರೆ ಎಲ್ಲಾ ಕೇಸುಗಳನ್ನು ಯಾವಾಗ ಕ್ಲಿಯರ್ ಮಾಡುತ್ತೀರಿ ಎಂಬುದಕ್ಕೆ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ :— ಮಾನ್ಯ ಅಧ್ಯಕ್ಷರೇ, ಇದು ಸಂಪೂರ್ಣವಾಗಿ ಕೇಂದ್ರ ಸರ್ಕಾರದ ಯೋಜನೆ. 11ನೇ ಹಣಕಾಸು ಆಯೋಗ ಈ ಒಂದು ತೀರ್ಮಾನವಾಗದೆ ಅನೇಕ ಜನ ಜೈಲಿನಲ್ಲಿ ಕೊಳೆಯುತ್ತಿದ್ದಾರೆ ಎಂಬುದನ್ನು ಗಮನಿಸಿ ಈ ಫಾಸ್ಟ್ ಟ್ರ್ಯಾಕ್ಟ್ ಕೋರ್ಟುಗಳನ್ನು ಮಾಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದಾರೆ. ಅದರಲ್ಲಿ ಸುಮಾರು ಒಂದೊಂದು ಜಿಲ್ಲೆಗೆ ಐದಾರು ಕೋರ್ಟುಗಳನ್ನು ಮಾಡಬೇಕೆಂದು ಈ ಯೋಜನೆಯ ಗುರಿ ಇದೆ. ನಮ್ಮ ರಾಜ್ಯಕ್ಕೂ ಇಂತಹ 150 ಕೋರ್ಟುಗಳನ್ನು ಮಂಜೂರು ಮಾಡುವುದಕ್ಕಾಗಿ ಕೇಂದ್ರ ಸರ್ಕಾರದಿಂದ ಅನುಮತಿ ದೊರೆತಿದೆ. ಆದರೆ ಈ ಸ್ಕೀಮಿಗೆ ಐದು ವರ್ಷಗಳ ಅವಧಿ ಇದೆ. ಈಗಾಗಲೇ ಒಟ್ಟು 27.2 ಕೋಟಿ ರೂಪಾಯಿಗಳನ್ನು ಕರ್ನಾಟಕಕ್ಕೆ ಕೇಂದ್ರ ಸರ್ಕಾರ ಬಿಡುಗಡೆ ಮಾಡಿದೆ. 2000-2001ನೇ ಸಾಲಿಗೆ 10 ಕೋಟಿ 87 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈ ಐದು ವರ್ಷಗಳಲ್ಲಿ 27 ಕೋಟಿ ರೂಪಾಯಿಗಳನ್ನು ಏನು ರಾಜ್ಯ ಸರ್ಕಾರಕ್ಕೆ ಕೊಡುತ್ತಾರೆ ಅದನ್ನು ನಾವು ಖರ್ಚು ಮಾಡುತ್ತೇವೆ. 2000 ಮತ್ತು 2001ನೇ ಸಾಲಿನಲ್ಲಿ ಕೊಟ್ಟಿರತಕ್ಕಂಥ 10 ಕೋಟಿ 87 ಲಕ್ಷದಲ್ಲಿ ಈಗಾಗಲೇ 5 ಕೋಟಿ 43 ಲಕ್ಷ ರೂಪಾಯಿಗಳು ಬಿಡುಗಡೆಯಾಗಿದೆ. ನಾವು ಈ ಸಾರಿ 40 ಕೋರ್ಟುಗಳನ್ನು ಮಾಡಬೇಕೆಂದು ಆಲೋಚನೆ ಮಾಡಿದ್ದೆವು. ಆದರೆ ಅದು ಸಾಧ್ಯವಾಗದೆ ಈಗ ಈ ವರ್ಷ 13 ಕೋರ್ಟುಗಳನ್ನು ಕೈಗೆತ್ತಿಕೊಂಡಿದ್ದೇವೆ. ಇದು ಕೇಂದ್ರಸರ್ಕಾರದಿಂದ ಬರತಕ್ಕಂಥ ಹಣವಾದರೂ ಇಲ್ಲಿ ಫೈನಾನ್ಸ್‌ನಿಂದ ಕ್ಲಿಯರೆನ್ಸ್ ಬೇಕಾಗಿರುವುದರಿಂದ ಹಣ ಅಲ್ಲಿ ಇದೆ. ಎಲ್ಲೆಲ್ಲಿ ನ್ಯಾಯಧೀಶರುಗಳು ಕಾಲಕಾಲಕ್ಕೆ ಸರಿಯಾಗಿ ಸಿಗುತ್ತಾರೆ ಅಷ್ಟು ತ್ವರಿತವಾಗಿ ನಾವು ಈ ನ್ಯಾಯಾಲಯಗಳನ್ನು ಪ್ರಾರಂಭಿಸುತ್ತೇವೆ.

ಶ್ರೀ ಜಗದೀಶ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :— ಸನ್ಮಾನ್ಯ ಅಧ್ಯಕ್ಷರೇ, ಇದೇನು, ಫಾಸ್ಟ್ ಟ್ರ್ಯಾಕ್ ಕೋರ್ಟುಗಳು ಎಂದು ಹೇಳಿ ಕೇಂದ್ರಸರ್ಕಾರದ ಯೋಜನೆ ಇದೆ, ಇದು ಬಹಳ ಒಳ್ಳೆಯ ಯೋಜನೆ. ಅದರ ಸದುಪಯೋಗವನ್ನು ನಾವೆಲ್ಲರೂ ಮಾಡಿಕೊಳ್ಳಬೇಕಾಗುತ್ತದೆ. ಏಕೆಂದರೆ ಇವತ್ತು ``Justice delayed is justice denied" ಎನ್ನುವಂಥಾದ್ದು ಏನಿದೆಯಲ್ಲಾ, ಬಹುಶಃ ಇದು ನ್ಯಾಯ ದೊರೆಯಲು ವಿಳಂಬವಾಗುತ್ತಿದೆ ಎನ್ನುವ ಉದ್ದೇಶದಿಂದಲೇ ಈ ಫಾಸ್ಟ್ ಟ್ರ್ಯಾಕ್ ಕೋರ್ಟುಗಳನ್ನು ಮಾಡಿರುವಂಥಾದ್ದು. ಇವತ್ತು ಏನಾಗಿದೆ ಎಂದರೆ ಕೋರ್ಟಿನಲ್ಲಿ ವಿಳಂಬವಾಗುವುದರಿಂದ ಜನ ರಾಜಿ ಮಾಡಿಕೊಳ್ಳುವಂಥಾದ್ದು ಮತ್ತು ಬೇರೆ ಬೇರೆ ಶಕ್ತಿಗಳು ಪ್ರವೇಶ ಮಾಡಿ ಸೆಟಲ್‌ಮೆಂಟ್ ಮಾಡುವಂಥಾದ್ದು ಇವತ್ತು ನಡೆಯುತ್ತಿದೆ. ಹಾಗಾಗಿ ಫಾಸ್ಟ್ ಟ್ರ್ಯಾಕ್ ಕೋರ್ಟುಗಳು ಆದಷ್ಟು ಫಾಸ್ಟ್ ಟ್ರ್ಯಾಕ್‌ನಲ್ಲೇನೆ ಅನುಷ್ಠಾನ ಆಗುವಂಥಾದ್ದು ಆಗಬೇಕು. ತೀವ್ರಗತಿಯಿಂದ

ಆದನ್ನು ಮಾಡುವುದಕ್ಕೆ ಪ್ರಾರಂಭ ಮಾಡಬೇಕೆಂಬುದು ನನ್ನ ಕಾಳಜಿ. ಆದಕ್ಕೆ ಏನು ಹಣಕಾಸಿನ ಕ್ಲಿಯರೆನ್ಸ್ ಬೇಕೆಂದು ಇದೆಯಲ್ಲಾ, ಅದು ಪ್ರೊಸೀಜರ್ ವಿಳಂಬವಾಗಬಾರದು. ಆದಕ್ಕೆ ಪ್ರೊಸೀಜರ್ ವಿಳಂಬವಾಗದ ಹಾಗೆ ಏನು ಈ ಕೋರ್ಟುಗಳನ್ನು ಸ್ಥಾಪನೆ ಮಾಡುವುದಕ್ಕೆ ಸಾಧ್ಯವಿದೆ ಅದನ್ನು ಮಾಡಬೇಕು ಎನ್ನುವಂಥಾದ್ದು ನನ್ನ ಅನಿಸಿಕೆ.

ಶ್ರೀ ಡಿ.ಬಿ. ಚಂದ್ರೇಗೌಡ :— ವಿಶೇಷವಾಗಿ ಎರಡು ವರ್ಷಕ್ಕಿಂತ ಹೆಚ್ಚು ಕಾಲ ಯಾವ್ಯಾವ ಕೇಸುಗಳು ತೀರ್ಮಾನವಾಗಿಲ್ಲ ಅವುಗಳನ್ನು ಆದ್ಯತೆ ಮೇಲೆ ಇತ್ಯರ್ಥ ಮಾಡಬೇಕು ಎನ್ನುವುದು ಈ ಫಾಸ್ಟ್ ಟ್ರ್ಯಾಕ್ ಕೋರ್ಟುಗಳನ್ನು ಸ್ಥಾಪನೆ ಮಾಡಲು ಮುಖ್ಯ ಉದ್ದೇಶವೆನ್ನುವುದು ಒಂದನೇಯದು. ಎರಡನೇಯದು, ಅವರು ಹೇಳಿದಹಾಗೆ ನೆಗೋಷಿಯೇಶನ್ ಮತ್ತು ಸೆಟಲ್‌ಮೆಂಟ್ ಮಾಡಿಕೊಳ್ಳುವಂಥಾದ್ದು ಕ್ರಿಮಿನಲ್ ಕೇಸುಗಳಿಗೆ ವಿಶೇಷವಾಗಿ ಒತ್ತು ಕೊಟ್ಟಿರುವುದರಿಂದ ಅಂಥಾದ್ದೆಲ್ಲ ಆಗುವುದಿಲ್ಲ. ಆದ್ದರಿಂದ ಯಾವ ಉದ್ದೇಶದಿಂದ ಇದನ್ನು ಮಾಡಿದ್ದಾರೆ ಅದನ್ನು ಸಾಧ್ಯವಾದಷ್ಟು ತೀವ್ರಗತಿಯಿಂದ ಮಾಡಬೇಕೆಂದು ಮಾಡಿದ್ದೇವೆ. ಈಗ ಎಂಪವರ್ ಕಮಿಟಿ ಅಂತ ಮಾಡಿದ್ದೇವೆ. ಈ 13 ಕೋರ್ಟುಗಳನ್ನು ಮಾಡಬೇಕೆಂದು ಏನು ತೀರ್ಮಾನ ತೆಗೆದುಕೊಂಡಿದ್ದೇವೆ, ಅದಕ್ಕೆ ನ್ಯಾಯಾಧೀಶರು ಸಿಗಬೇಕು ಮತ್ತು ಕಟ್ಟಡಗಳು ಸಿಗಬೇಕು. ದುಡ್ಡು ಇದ್ದರೆ ಮಾತ್ರ ಈ ಕಾರ್ಯ ಆಗುವುದಿಲ್ಲ. ಅದಕ್ಕಾಗಿ ಮೊನ್ನೆ ಕೂಡ ನಾನು ರಾಜ್ಯದ ಮುಖ್ಯ ನ್ಯಾಯಾಧೀಶರ ಜೊತೆಯಲ್ಲಿ ಮಾತನಾಡಿದ್ದೇವೆ. ನ್ಯಾಯಾಧೀಶರನ್ನು ಒದಗಿಸಿಕೊಡುವುದು ಹೈಕೋರ್ಟಿನ ಕೆಲಸ. ಅದನ್ನು ನಾವು ನೇಮಕಾತಿ ಮಾಡುವುದಕ್ಕೆ ಆಗುವುದಿಲ್ಲ. ನಾವು ಎಲ್ಲಾ ಸೌಲಭ್ಯಗಳನ್ನು ಕೊಡಬಹುದು. ಆದರೆ ಈ ಕೆಲಸ ಎಲ್ಲಾ ಹೈಕೋರ್ಟಿನವರು ಮಾಡಬೇಕಾಗಿರುವುದರಿಂದ ಅವರ ಜತೆಗೆ ವ್ಯವಹರಿಸಿ ಸಾಧ್ಯವಾದಷ್ಟು ಬೇಗ ತಾವು ಹೇಳಿದಂಥ ರೀತಿಯಲ್ಲಿ ಮಾಡುತ್ತೇವೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ :— ಮಾನ್ಯ ಅಧ್ಯಕ್ಷರೇ, ನನಗೆ ಎರಡು ಕ್ಲಾರಿಫಿಕೇಷನ್‌ಗಳು ಬೇಕು. ಈ ಫಾಸ್ಟ್ ಟ್ರ್ಯಾಕ್ ಕೋರ್ಟುಗಳನ್ನು ಏನು ಪ್ರಾರಂಭ ಮಾಡುತ್ತಿದ್ದೀರಿ, ಇದು ಸಿವಿಲ್ ಕೇಸುಗಳು ಮತ್ತು ಕ್ರಿಮಿನಲ್ ಕೇಸುಗಳು ಎರಡು ತರಹ ದಾವೆಗಳನ್ನು ಕೂಡ ತೀರ್ಮಾನ ಮಾಡುವುದಕ್ಕೆ ಇದನ್ನು ಮಾಡುತ್ತಿದ್ದೀರಾ ಎನ್ನುವಂಥಾದ್ದು ಒಂದು. ಎರಡನೆಯದು ಏನೆಂದರೆ ಮೊಕದ್ದಮೆಗಳನ್ನು ಸ್ಪೀಡ್ ಆಫ್ ಮಾಡುವುದಕ್ಕೆ ಸಿವಿಲ್ ಪ್ರೊಸೀಜರ್ ಕೋಡ್ ಮತ್ತು ಕ್ರಿಮಿನಲ್ ಪ್ರೋಸೀಜರ್ ಕೋಡ್‌ಗೆ ತಿದ್ದುಪಡಿ ತರತಕ್ಕಂಥ ಏನಾದರೂ ಯೋಚನೆ ಇದೆಯೇ ಮತ್ತು ಮೂರನೆಯದು, ಏನೆಂದರೆ ಈ ಫಾಸ್ಟ್ ಟ್ರ್ಯಾಕ್ ಕೋರ್ಟುಗಳಲ್ಲಿ ಕೇಸ್‌ಗಳನ್ನು ಇತ್ಯರ್ಥ ಮಾಡುವುದಕ್ಕೆ ಪ್ರತ್ಯೇಕವಾಗಿ ನಿಯಮಾವಳಿಗಳನ್ನು ಏನಾದರೂ ರಚನೆ ಮಾಡಿದ್ದೀರಾ?

ಶ್ರೀ ಡಿ.ಬಿ. ಚಂದ್ರೇಗೌಡ :— ಈಗ ಇರತಕ್ಕಂಥ ಪ್ರಪೋಸಲ್‌ನಲ್ಲಿ ಹೆಚ್ಚಾಗಿ

ನಾವು ಕ್ರಿಮಿನಲ್ ಕೇಸುಗಳನ್ನು ತೀರ್ಮಾನ ಮಾಡುವುದಕ್ಕಾಗಿ ಇದನ್ನು ಮಾಡಿರತಕ್ಕದ್ದು. ಸಿವಿಲ್ ದಾವೆಗಳು ಈ ವ್ಯಾಪ್ತಿಗೆ ಒಳಪಡುವುದಿಲ್ಲ. ಎರಡನೇಯದಾಗಿ ಎವಿಡೆನ್ಸ್ ಆಕ್ಟ್, ಕ್ರಿಮಿನಲ್ ಪ್ರೊಸೀಜರ್ ಕೋಡ್‌ಗಳು ಬಗ್ಗೆ ಎಲ್ಲಾ ಕೋರ್ಟುಗಳಲ್ಲಿ ಸರ್ವೇಸಾಧಾರಣವಾಗಿ ಇರುವಂಥ ವ್ಯವಸ್ಥೆಯನ್ನೇ ಇಲ್ಲಿಯೂ ಅಳವಡಿಸಿಕೊಂಡಿದ್ದೇವೆ. ಇದಕ್ಕಾಗಿ ವಿಶೇಷವಾದಂಥ ಯಾವುದೇ ನಿಯಮಗಳನ್ನು ಬೇರೆ ರೂಪಿಸಿಲ್ಲ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ :— ಈ ಫಾಸ್ಟ್ ಟ್ರ್ಯಾಕ್ ಕೋರ್ಟುಗಳ ಸಲುವಾಗಿ ಏನಾದರೂ ಪ್ರತ್ಯೇಕ ರೂಲ್ಸ್‌ನ್ನು ಫ್ರೇಮ್ ಮಾಡಿದ್ದೀರಾ ಎಂದು ನಾನು ಕೇಳುತ್ತಿರುವುದು.

SRI D.B. Chandra Gowda :— All the procedures laid down under Cr. PC,, Evidence Act should apply to the Special Courts also.

ಶ್ರೀ ಎಸ್. ಸುರೇಶ್ ಕುಮಾರ್ :— ಸಭಾಧ್ಯಕ್ಷರೇ, ``justice delayed is justice denied. " ಬಹಳಷ್ಟು ಜನ ಇವತ್ತು ಈ ಕಾರಣಕ್ಕಾಗಿ ಒದ್ದಾಡುತ್ತಿದ್ದಾರೆ. ತಾವು ಹೇಳಿದ ಪ್ರಕಾರ ಈ ಕಟ್ಟಡಗಳನ್ನು ನಿರ್ಮಿಸಲು ಸ್ಥಳಾವಕಾಶ ದೊರೆತಮಾಲೆ ಇದೆಲ್ಲಾ ಮಾಡುತ್ತೀರಿ. ಈಗ ಇವತ್ತಿನ ಪ್ರಕಾರ ಈಗಾಗಲೇ ಮಾನ್ಯ ಮುದ್ದಹನುಮೇಗೌಡರು ಹೇಳಿದ್ದಾರೆ. ಪ್ರತಿದಿವಸ 150ರಿಂದ 200 ಕೇಸುಗಳನ್ನು ಕೋರ್ಟಿನಲ್ಲಿ ಹಾಕುತ್ತಾರೆ. ಮೊದಲನೇ ಹಿಯರಿಂಗ್ ಮುಗಿಯುವ ಹೊತ್ತಿಗೆ ಹನ್ನೆರಡೂ ಮುಕ್ಕಾಲು ಗಂಟೆಯಿಂದ ಒಂದು ಗಂಟೆವರೆಗೆ ಆಗಿರುತ್ತದೆ. ಅಷ್ಟು ಹೊತ್ತಿಗೆ ಪ್ರಿಸೈಡಿಂಗ್ ಆಫೀಸರ್ ಯಾರು ಇರುತ್ತಾರೆ ಅವರು ತಮ್ಮ ಶಕ್ತಿಯನ್ನು ಕಳೆದುಕೊಂಡಿರುತ್ತಾರೆ ಮತ್ತು ಸುಸ್ತಾಗಿರುತ್ತಾರೆ. ಪ್ರತಿದಿವಸ ಮೂರು ಅಥವಾ ನಾಲ್ಕು ಎವಿಡೆನ್ಸ್ ಮಾಡಿದರೂ ಕೂಡ ಇವತ್ತು ಆಗುತ್ತಿಲ್ಲ. ಸರ್ಕಾರಕ್ಕೆ ನನ್ನದೊಂದು ಸಲಹೆ. ಈ ರಿಜಿಸ್ಟ್ರಾರ್‌ಗಳು ಏನಿದ್ದಾರೆ ಅವರ ಮುಂದೆ ಫಸ್ಟ್ ಹಿಯರಿಂಗ್ ಸಂಗತಿಗಳಿವೆಯಲ್ಲಾ, ಅದು ಅಬ್ಜೆಕ್ಷನ್ಸ್ ಫೈಲ್ ಮಾಡುವುದು ಇರಬಹುದು, ಸಮನ್ಸ್ ಕಳುಹಿಸುವುದು ಇರಬಹುದು ಇದನ್ನೆಲ್ಲಾ ಮುಗಿಸಿ ಒಂದು ಸಲ ಕೋರ್ಟು ಪ್ರಾರಂಭವಾದ ತಕ್ಷಣ ಎವಿಡೆನ್ಸ್ ರೆಕಾರ್ಡಿಂಗ್ ಮಾಡುವುದಕ್ಕೆ ರಾಜ್ಯ ಸರ್ಕಾರ ಯೋಚನೆ ಮಾಡಬಹುದಾ? ಹಾಗೆ ಮಾಡಿದಾಗ ಮಾತ್ರ ನಾವು ಫಾಸ್ಟ್ ಟ್ರ್ಯಾಕ್ ಕೋರ್ಟ್ ಜೊತೆಗೆ ಈಗಿರುವ ಕೋರ್ಟುಗಳ ವ್ಯವಸ್ಥೆಯಲ್ಲಿ ನಾವು ನ್ಯಾಯದ ಕಡೆಗೆ ಕಾಲಿಟ್ಟಹಾಗೆ ಆಗುತ್ತದೆ. ಇದರ ಬಗ್ಗೆ ಸರ್ಕಾರ ಯೋಚನೆ ಮಾಡಬಹುದಾ?

ಶ್ರೀ ಡಿ.ಬಿ. ಚಂದ್ರೇಗೌಡ :— ಬಹಳ ಅನುಭವೀ ಸಲಹೆಯನ್ನು ಕೊಟ್ಟಿದ್ದೀರಿ. ಮುಖ್ಯವಾದದ್ದು ಏನೆಂದರೆ ಯಾವ ದಾವೆಗಳು ಎರಡು ವರ್ಷಕ್ಕಿಂತ ಹೆಚ್ಚು ದೀರ್ಘಕಾಲದಿಂದ ಕೊಳೆಯುತ್ತಿವೆ, ಅಂಥಾದ್ದು ಅಷ್ಟೇ ತೆಗೆದುಕೊಳ್ಳುತ್ತೇವೆ. ಎರಡನೆಯದು ಯಾವ ದಾವಾವನ್ನು ಇವತ್ತು ತೆಗೆದುಕೊಳ್ಳುತ್ತೇವೆ ಅದು ಮುಗಿಯುವವರಗೆ ಬೇರೆ ಕೇಸನ್ನು ತೆಗೆದುಕೊಳ್ಳುವುದಿಲ್ಲ. ಪ್ರಿಲಿಮಿನರಿ ಹಿಯರಿಂಗ್ ಬಗ್ಗೆ ನಾವೆಲ್ಲರೂ ವಕೀಲರಾಗಿ ನೋಡಿದ್ದೇವೆ....

ಶ್ರೀ ಎಸ್. ಸುರೇಶ್ ಕುಮಾರ್:— ಫಾಸ್ಟ್ ಟ್ರ್ಯಾಕ್ ಕೋರ್ಟುಗಳನ್ನು ಬಿಟ್ಟು ನಾನು ಹೇಳುತ್ತಿರುವುದು.

ಶ್ರೀ ಡಿ.ಬಿ. ಚಂದ್ರೇಗೌಡ:— ನಾನು ಫಾಸ್ಟ್ ಟ್ರ್ಯಾಕ್ ಕೋರ್ಟ್ ಬಗ್ಗೆ ಸಂಬಂಧಪಟ್ಟಿದ್ದು ಎಂದು ತಿಳಿದುಕೊಂಡಿದ್ದೆ. ಈಗ ಹಣ ಇದೆ. ಆದರೆ ತಾಂತ್ರಿಕವಾಗಿ ಸಣ್ಣ ಸಣ್ಣ ತೊಂದರೆಗಳು ಇವೆ. ನ್ಯಾಯಾಧೀಶರನ್ನು ನೇಮಕ ಮಾಡಬೇಕು. ಮತ್ತೊಂದು ವಿಷಯ ಏನೆಂದರೆ ನಾವು ಯಾರನ್ನೂ ಪರ್ಮನೆಂಟ್ ನೌಕರರನ್ನು ಇಲ್ಲಿ ತೆಗೆದುಕೊಳ್ಳುವುದಿಲ್ಲ. ಅಲ್ಲಿರತಕ್ಕಂಥ ಸೀನಿಯರ್ ಅಡ್ವೋಕೇಟ್‌ಗಳನ್ನು ಪಬ್ಲಿಕ್ ಪ್ರಾಸಿಕ್ಯೂಟರ್ಸ್ ಆಗಿ ನೇಮಕ ಮಾಡುತ್ತೇವೆ. ಅವರಿಗೆ ಕೆಲವೊಂದು ಸೌಲಭ್ಯಗಳನ್ನು ಕೊಡಬೇಕೆಂದು ನಿಗದಿ ಮಾಡಿದ್ದೇವೆ. ಆದ್ದರಿಂದ ಈ ಕೋರ್ಟುಗಳಲ್ಲಿ ವಿಳಂಬ ಆಗುವುದಕ್ಕೆ ಸಾಧ್ಯವಿಲ್ಲ. ವಿಳಂಬವನ್ನು ಕಿತ್ತುಹಾಕಬೇಕು ಎನ್ನುವ ದೃಷ್ಟಿಯಿಂದ ಈ ಫಾಸ್ಟ್ ಟ್ರ್ಯಾಕ್ ಕೋರ್ಟುಗಳನ್ನು ಮಾಡಿರುವುದು. ಆ ಉದ್ದೇಶಕ್ಕೆ ಭಂಗ ಬಾರದಹಾಗೆ ಕೇಸುಗಳನ್ನು ಮುಗಿಸುತ್ತೇವೆ. ಬಾಕಿ ನೀವು ಏನು ಪ್ರಸ್ತಾಪ ಮಾಡಿದ್ದೀರಿ, ಅದು ನಮ್ಮ ಕೈಯಲ್ಲಿ ಇಲ್ಲ. ರಾಜ್ಯ ಉಚ್ಚ ನ್ಯಾಯಾಲಯಕ್ಕೆ ತಮ್ಮ ಸಲಹೆಗಳನ್ನು ಕಳಿಸಿಕೊಡುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ:— ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಈ ಫಾಸ್ಟ್ ಟ್ರ್ಯಾಕ್ ಕೋರ್ಟ್‌ಗಳ ಕಾನ್ಸೆಪ್ಟ್ ಬಗ್ಗೆ ಹೇಳಿದರು. ಮುನ್ಸಿಫ್ ಮ್ಯಾಜಿಸ್ಟ್ರೇಟ್ ಕೋರ್ಟುಗಳು ನಮ್ಮಲ್ಲಿ ಇವೆ. ಇಲ್ಲಿ ಪ್ರೊಸೀಡಿಂಗ್ಸ್ 7-8-10 ವರ್ಷ ಆಗುತ್ತದೆ. ನಮ್ಮ ಚುನಾವಣೆ ಕೇಸುಗಳು ಎರಡೆರಡು ಅವಧಿಯದ್ದು ಇನ್ನೂ ಮುಗಿದಿಲ್ಲ. ಹಾಗೆಯೇ ಸಿವಿಲ್ ಕೋರ್ಟುಗಳು ಅಲ್ಲಿ ಇವೆ. ಆ ಕೇಸುಗಳೂ ಮುಗಿಯುವುದಿಲ್ಲ. ಈಗ ಮಾನ್ಯ ಸುರೇಶ್ ಕುಮಾರ್ ಅವರು ಹೇಳಿದರು. ಇಲ್ಲ ಇದನ್ನು ಬೈಫರ್‌ಕೇಟ್ ಮಾಡಿ 175 ತಾಲ್ಲೂಕುಗಳಲ್ಲಿ ಮ್ಯಾಜಿಸ್ಟ್ರೇಟ್ ಕೋರ್ಟುಗಳು ಬೇರೆ ಮುನ್ಸಿಫ್ ಕೋರ್ಟುಗಳು ಬೇರೆ ಎಂದು ಮಾಡಿ, ಸಿವಿಲ್ ಪ್ರೊಸೀಡಿಂಗ್ಸ್ ಮಾಡುವುದಕ್ಕೆ ಈ ರೀತಿ ಏನಾದರೂ ಈ ಬಗ್ಗೆ ಕಾನ್ಸೆಪ್ಟ್ ಇದೆಯಾ? ಇದು ಟ್ರಯಲ್ ಮತ್ತು ಸಿವಿಲ್ ಜಡ್ಜ್ ಕೋರ್ಟುಗಳಿಗೂ ಅಪ್ಲೆ ಆಗುತ್ತದೆ. ಮತ್ತೆ ತಾವು ಸಿಬ್ಬಂದಿ ಬಗ್ಗೆ ಹೇಳಿದಿರಿ. ಅಲ್ಲಿ ಕೊಡುವ ಪಬ್ಲಿಕ್ ಪ್ರಾಸಿಕ್ಯೂಟರ್ಸ್ ಮತ್ತು ಪ್ಲೀಡರ್ಸ್ ಬಗ್ಗೆ ಇದಕ್ಕೆ ಬೇರೆ ಏನೋ ವಿಶೇಷವಾಗಿ ಉಂಟು ಎಂದು. ಮಾನ್ಯ ರಾಮಲಿಂಗಾರೆಡ್ಡಿಯವರು ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ಹತ್ತಾರುಸಾವಿರ ಮೊಕದ್ದಮೆಗಳು ಇವೆ. ಇವತ್ತು ಪ್ರತಿದನ ತಿರುಗುವುದು, ಏರ್ಚು ಇವೆಲ್ಲಾ ಬರುತ್ತದೆ. ದಯವಿಟ್ಟು ಕಾನ್ಸೆಪ್ಟ್ ಬಗ್ಗೆ ಏನಿದೆ ಎಂಬ ಬಗ್ಗೆ ಮಾಹಿತಿಯನ್ನು ಕೊಡಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ:— ಮುಖ್ಯವಾಗಿ ಕಾನ್ಸೆಪ್ಟ್ ಏನೆಂದರೆ, ಬಹಳ ದೀರ್ಘ ಕಾಲ ನೆನೆಗುದಿಗೆ ಬಿದ್ದಿರತಕ್ಕಂಥ ಕ್ರಿಮಿನಲ್ ದಾವಾಗಳನ್ನು ಮುಗಿಸತಕ್ಕಂಥಾದ್ದು ಇದರ ಬೇಸಿಕ್ ಕಾನ್ಸೆಪ್ಟ್. ಸಿವಿಲ್ ಕೋರ್ಟ್‌ಗಳೇ ಬೇರೆ ಇದ್ದಾವೆ. ಈ ಫಾಸ್ಟ್ ಟ್ರ್ಯಾಕ್ ಕೋರ್ಟ್ಸ್ ಕನ್‌ಫೈನ್ಸ್ ಟು ಲಾಂಗ್ ಡಿಲೇಡ್ ಕೇಸಸ್ ಏನಿವೆ ಅವುಗಳನ್ನು ಸಾಧ್ಯವಾದಷ್ಟು ಬೇಗ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇದನ್ನು ಲಾಕ್‌ಸ್ಟಾಕ್ ಅಂಡ್ ಬ್ಯಾರಲ್

ಇನ್ನೊಂದು ಕೋರ್ಟಿನ ಜೊತೆಗೆ ಹೋಲಿಕೆ ಮಾಡುವುದಕ್ಕೆ ಆಗುವುದಿಲ್ಲ. ಪ್ರೊಸೀಜರ್ ಎಲ್ಲಾ ಒಂದೇ. ಆಕ್ಟ್‌ಗಳು, ಶಾಸನಗಳು ಒಂದೇ ಇದ್ದು. ಇಲ್ಲಿ ಕೇಸುಗಳು ಬಹಳ ಬೇಗ ತೀರ್ಮಾನವಾಗುವುದಕ್ಕೆ ಮಾತ್ರ ವ್ಯವಸ್ಥೆ ಮಾಡಿದ್ದೇವೆ. ಆದರಿಂದ, ನೀವು ಹೇಳಿದಹಾಗೆ ಸಾವಿರಾರು ಕ್ರಿಮಿನಲ್ ಕೇಸುಗಳು ಏನು ಕೊಳೆಯುತ್ತಾ ಬಿದ್ದಿವೆ, ಆ ಮೊಕದ್ದಮೆಗಳಿಗೆ ಇಲ್ಲಿ ಪರಿಹಾರ ಸಿಗುತ್ತದೆ ಎಂಬುದು ನನ್ನ ವಿಶ್ವಾಸ. ಈ ವಿಶ್ವಾಸದ ಮೇಲೆ ಕೇಂದ್ರ ಸರ್ಕಾರ ತೀರ್ಮಾನ ತೆಗೆದುಕೊಂಡು, ದುಡ್ಡು ಅವರು ಒದಗಿಸಿಕೊಡುತ್ತಾರೆ. ನಾವು ಏನಿದ್ದರೂ ಇನ್‌ಫಾಸ್ಟ್ರಕ್ಚರ್ ಮಾತ್ರ ಕೊಡುತ್ತೇವೆ.

ಶ್ರೀ ಎನ್.ಹೆಚ್. ಪುಟ್ಟರಂಗನಾಥ್ :— ಇಲ್ಲಿ ಒಂದು ಮುಖ್ಯವಾದ ಅಂಶವನ್ನು ತಾವು ಗಮನಿಸಬೇಕು. ಏನೆಂದರೆ, ಈ ಕೇಸುಗಳನ್ನು ನಡೆಸುವಾಗ ವಿನಾಕಾರಣ ನ್ಯಾಯವಾದಿಗಳು ಅಡ್ಜರ್ನ್‌ಮೆಂಟ್ ತೆಗೆದುಕೊಳ್ಳತಕ್ಕ ವಿಚಾರದಲ್ಲಿ ಬಿಗಿಯಾಗಿ ಇದನ್ನು ಪಾಲನೆ ಮಾಡಿದರೆ ಈ ತರಹ ಕೇಸುಗಳು ಉಳಿಯುವುದಿಲ್ಲ. ಬಹುತೇಕ ಕಾರಣ ಇಲ್ಲದೇ ಅಡ್ಜರ್ನ್‌ಮೆಂಟ್ ತೆಗೆದುಕೊಳ್ಳುವುದು ಅವ್ಯಾಹತಾಗಿ ನಡೆದುಕೊಂಡು ಹೋಗಿದೆ. ಇದನ್ನು ತಪ್ಪಿಸುವುದಕ್ಕೆ ಏನಾದರೊಂದು ವ್ಯವಸ್ಥೆ ಮಾಡುತ್ತೀರಾ?

ಶ್ರೀ ಡಿ.ಬಿ. ಚಂದ್ರೇಗೌಡ :— ನಾನು ಫಾಸ್ಟ್ ಟ್ರಾಕ್ ಕೋರ್ಟಿಗೆ ಸೀಮಿತವಾಗಿ ಹೇಳಿದ್ದೇನೆ. ಇಲ್ಲಿ ಅಡ್ಜರ್ನ್‌ಮೆಂಟಿಗೂ ಅವಕಾಶವೇ ಇಲ್ಲ. ಒಂದು ಸಾರಿ ದಾವಾ ಕೈಗೆ ತೆಗೆದುಕೊಂಡರೆ, ಅದನ್ನು ಪೂರೈಸುವವರೆಗೆ ಅಡ್ಜರ್ನ್‌ಮೆಂಟಿಗೆ ಅವಕಾಶ ಇಲ್ಲ. ಉಳಿದ ವಿಚಾರಗಳು ಏನಿವೆ, ಅದರ ಬಗ್ಗೆ ಹೈಕೋರ್ಟಿನವರು ತೆಗೆದುಕೊಳ್ಳುತ್ತಾರೆ.

ಶ್ರೀ ಕೆ.ಹೆಚ್. ಹನುಮೇಗೌಡ :— ಸನ್ಮಾನ್ಯ ಅಧ್ಯಕ್ಷರೇ, ಕ್ರಿಮಿನಲ್ ಕೇಸಸ್ ಸಾಮಾನ್ಯವಾಗಿ ಕೋರ್ಟಿನಲ್ಲಿ ನೂರಕ್ಕೆ ತೊಂಭತ್ತು ಭಾಗ ನೆಗೆದುಬಿದ್ದು ಹೋಗುತ್ತದೆ. ನಿಜವಾಗಿಯೂ ನಡೆದಿರತಕ್ಕ ಕ್ರಿಮಿನಲ್ ಕೇಸೂ ಕೂಡ ಆ ಲಾಯರುಗಳ ಬುದ್ಧಿವಂತಿಕೆ ಮೇಲೆ ಮತ್ತು ಇನ್ನು ಯಾವಯಾವುದೋ ಕಾರಣಕ್ಕೆ ಆ ಕೇಸುಗಳು ವಜಾ ಆಗುತ್ತವೆ. ಇದರಿಂದ ಬಹಳ ಕೆಟ್ಟ ಪರಿಣಾಮ ದೇಶದ ಮೇಲೆ, ಸಮಾಜದ ಮೇಲೆ ಆಗಿದೆ. ಹತ್ತಾರು ಮರ್ಡರ್ ಕೇಸನ್ನು ಮಾಡಿ ಸರಿಯಾದ ಲಾಯರನ್ನು ಇಟ್ಟುಕೊಂಡು ಬಚಾವ್ ಆಗಿ ಬಂದಿರುವ ವ್ಯಕ್ತಿಗಳೂ ಇದ್ದಾರೆ. ಇದನ್ನು ತಪ್ಪಿಸುವುದಕ್ಕೆ ಸಮಾಜದಲ್ಲಿ ಕೊಲೆ, ದರೋಡೆ ಮತ್ತು ಸುಲಿಗೆಯನ್ನು ಕಂಟ್ರೋಲ್ ಮಾಡುವುದಕ್ಕೆ ಆಗುವುದಿಲ್ಲ. ಈಗ ಕೋರ್ಟ್‌ನಲ್ಲಿ ಫಾಲೋ ಮಾಡುತ್ತಿರುವುದು ಎವಿಡೆನ್ಸ್ ಆಕ್ಟ್ ಯಾವುದೋ ಕಾಲದಲ್ಲಿ ಜನ ಏನೇ ಮಾಡಿದರೂ ನೂರಕ್ಕೆ ನೂರು ಸತ್ಯವನ್ನು ಹೇಳತಕ್ಕಂಥ ಕಾಲದಲ್ಲಿ ರಚನೆ ಮಾಡಿದಂಥ ಎವಿಡೆನ್ಸ್ ಆಕ್ಟ್. ಅದನ್ನು ಇಟ್ಟುಕೊಂಡು ಈಗಿನ ಕಾಲದಲ್ಲಿ ವಿಚಾರಣೆ ಮಾಡಿದರೆ ಆ ಆಧಾರದ ಮೇಲೆ ಕೇಸುಗಳೆಲ್ಲಾ ವಜಾ ಆಗುವುದಕ್ಕೆ ಅದೇ ಮೂಲ ಕಾರಣ. ಈಗ ಕಾಲ ಬದಲಾವಣೆಯಾಗಿರುವುದರಿಂದ, ಹತ್ತಾರು ವರ್ಷಗಳು, ನೂರಾರು ವರ್ಷಗಳಲ್ಲಿ ಅಪರಾಧಿಗಳು ಎಸ್ಕೇಪ್ ಆಗಿ, ಸುಲಭವಾಗಿ ತಪ್ಪಿಸಿಕೊಳ್ಳುವುದಕ್ಕೆ ಅವಕಾಶವಿರುವುದರಿಂದ ಇದರ ಬಗ್ಗೆ ಚಿಂತನೆ ಮಾಡಿ, ಎವಿಡೆನ್ಸ್ ಆಕ್ಟನ್ನು ಮಾರ್ಪಾಡು

ಮಾಡುವುದಕ್ಕೆ ಅವಕಾಶವಿರುವುದರಿಂದ ಇದರ ಬಗ್ಗೆ ಚಿಂತನೆ ಮಾಡಿ, ಎವಿಡೆನ್ಸ್ ಆಕ್ಟನ್ನು ಮಾರ್ಪಾಡು ಮಾಡುವುದಕ್ಕೆ ಯೋಚನೆ ಮಾಡುತ್ತೀರಾ? ಈಗಿನ ದೋಷವೇನೆಂದರೆ, ನೂರು ಜನ ಕಳ್ಳರು ಬೇಕಾದರೂ ಹೋಗಿಬಿಡಬಹುದಂತೆ. ನೋಡಿ ಎಂತಹ ಗೋಲ್ಡನ್ ರೂಲ್ ಮಾಡಿಟ್ಟಿದ್ದಾರೆ. ಒಬ್ಬ ಮಾತ್ರ ನಿರಪರಾಧಿಗೆ ಶಿಕ್ಷೆ ಆಗಬಾರದಂತೆ! ಒಬ್ಬನಿಗೆ ಶಿಕ್ಷೆಯಾದರೆ ಮಹಾ ದೊಡ್ಡದಾಗುತ್ತೆ. ಆದರೆ, ನೂರು ಜನ ಹೆಂಡತಿ ಮಕ್ಕಳನ್ನು ಕಳೆದುಕೊಂಡವರು, ದರೋಡೆ ಮಾಡಿದರು, ಚೈನ್ ಕಳೆದುಕೊಂಡವರು, ಕೈ ಕಾಲು ಕಳೆದುಕೊಂಡವರು, ಇವರು ನೂರು ಜನ ಬೇಕಾದರೂ ಹೋಗಬಹುದು. ಈ ದೇಶದಲ್ಲಿ ಎಂತಹ ಕಾನೂನು ಸ್ವಾಮಿ? ಫ್ರಾನ್ಸ್ ದೇಶದಲ್ಲಿ ನೂರು ಜನ ನಿರಪರಾಧಿಗಳು ಒಳಗೆ ಹೋದರೂ ಚಿಂತೆ ಇಲ್ಲ, ಒಬ್ಬ ಕಳ್ಳನನ್ನು ಮಾತ್ರ ಬಿಡುವುದಕ್ಕಾಗುವುದಿಲ್ಲವೆಂದು ಕಾನೂನು ಇದೆ. ಹೀಗೆ ಬೇರೆ ಬೇರೆ ದೇಶಗಳಲ್ಲಿ, ಬೇರೆ ಬೇರೆ ಕಾನೂನು ಇರುವುದರಿಂದ, ಈ ದೇಶಕ್ಕೆ ಹೊಂದಿಕೊಳ್ಳುವಂಥ ಕಾನೂನು ಮಾಡಲು ಒಂದು ಕಾನೂನು ಇರುವುದರಿಂದ, ಈ ದೇಶಕ್ಕೆ ಹೊಂದಿಕೊಳ್ಳುವಂಥ ಕಾನೂನು ಮಾಡಲು ಒಂದು ಕಮಿಷನ್ ಮಾಡಿ, ಈ ಎವಿಡೆನ್ಸ್ ಆಕ್ಟನ್ನು ನಿಮ್ಮ ಕಾಲದಲ್ಲಾದರೂ ತಿದ್ದುಪಡಿ ಮಾಡಬೇಕು.

ಶ್ರೀ ಸಿ. ಬೈರೇಗೌಡ :— ಈ ಸದನದಲ್ಲಿಯೇ ತಿದ್ದುಪಡಿ ಮಾಡುವುದಕ್ಕೆ ಅವಕಾಶ ಇದೆ.

ಶ್ರೀ ಕೆ.ಹೆಚ್. ಹನುಮೇಗೌಡ :— ಈ ಎವಿಡೆನ್ಸ್ ಆಕ್ಟ್ ಬಗ್ಗೆ ಚಿಂತನೆ ಮಾಡಿ, ಈ ಕಾಲಕ್ಕೆ ಸೂಕ್ತವಾಗಿರುವಂತೆ ಬದಲಾವಣೆ ಮಾಡುವುದಕ್ಕೆ ಕಮಿಷನ್ ಮಾಡಬೇಕು. ಕೇಂದ್ರ ಸರ್ಕಾರಕ್ಕೆ ಶಿಫಾರಸ್ ಮಾಡಬೇಕು. ಇದರ ಬಗ್ಗೆ ಏನಾದರೊಂದು ಆಲೋಚನೆ ಮಾಡುತ್ತೀರಾ ಎಂಬ ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ :— ಅವರು ಹೇಳಿರತಕ್ಕ ವಿಚಾರಗಳೆಲ್ಲಾ ಸತ್ಯವೇ. ಅದನ್ನು ನಾನೂ ಒಪ್ಪುತ್ತೇನೆ. ಅವರು ಅನುಭವದ ಮಾತನ್ನು ಆಡಿದ್ದಾರೆ. ಆದರೆ, ಈ ಅನುಭವ, ಸತ್ಯಗಳು ಎಲ್ಲಾ ಗೊತ್ತಿದ್ದರೂ ನಮ್ಮ ಕೈಲಿ ಇಲ್ಲದೇ ಇರುವ ಕಾರಣವನ್ನು ನಾವು ಮಾಡುವುದಕ್ಕಾಗುವುದಿಲ್ಲ. ಇದನ್ನು ಸಂಸತ್ತಿಗೆ ಕಳುಹಿಸಬೇಕಾಗುತ್ತದೆ. ಎವಿಡೆನ್ಸ್ ಆಕ್ಟ್, ಕ್ರಿಮಿನಲ್ ಪ್ರೊಸೀಜರ್ ಕೋಡ್ ಅವರಿಗೇ ಗೊತ್ತಿರುವಹಾಗೆ ಸಂಸತ್ತಿನ ವ್ಯವಸ್ಥೆಯೊಳಗೆ ಬರುತ್ತದೆ. ಆದ್ದರಿಂದ, ಅವರು ಹೇಳಿರತಕ್ಕ ಸಲಹೆಯನ್ನು, ನಾನು ಸಾಧ್ಯವಾದರೆ ಕೇಂದ್ರದ ಕಾನೂನು ಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್ :— ಜೈಲುಗಳಿಗೆ ಭೇಟಿ ಕೊಟ್ಟ ಸಂದರ್ಭದಲ್ಲಿ ಅಲ್ಲಿರುವಂಥ ಖೈದಿಗಳಲ್ಲಿ ವೈಯಕ್ತಿಕವಾಗಿ ವಿಚಾರಿಸಿದಾಗ, ಅವರು ಮಾಡಿದಂತಹ ಅಪರಾಧಗಳಿಗೆ ಬಹುಶಃ ಅದರ ಎರಡು ಮೂರು ಪಟ್ಟು ಜೈಲುವಾಸ ಅವರಿಗೆ ಈಗಾಗಲೇ ಆಗಿರುತ್ತದೆ. ಅಂತಹ ಸಂದರ್ಭದಲ್ಲಿ ಫಾಸ್ಟ್ ಟ್ರಾಕ್‌ಗಳ ಮೂಲಕವೇ ಇತ್ಯರ್ಥ ಮಾಡುವುದರ ಬದಲು, ಸರ್ಕಾರವೇ ನೇರವಾಗಿ ತೀರ್ಮಾನ ತೆಗೆದುಕೊಂಡು

ಅಂತಹ ಅಪರಾಧಿಗಳನ್ನು ಏನಾದರೂ ಬಿಡುಗಡೆ ಮಾಡಲಿಕ್ಕೆ ಸಾಧ್ಯವಾಗುತ್ತದೆಯೇ ಈ ಕೇಸುಗಳನ್ನು ಇತ್ಯರ್ಥ ಮಾಡುವುದಕ್ಕೆ ಆಗುತ್ತದೆಯೇ? ಇಂತಹ ದು ದುಸ್ಥಿತಿಯಿಂದ ಅವರು ಅಲ್ಲಿ ಕೊಳೆಯುತ್ತಿರುತ್ತಾರೆ. ಅದರ ಬಗ್ಗೆ ಏನಾದರೂ ನಿರ್ಣಯ ತೆಗೆದುಕೊಳ್ಳುವುದಕ್ಕಾಗುತ್ತದೆಯೇ।

ಶ್ರೀ ಡಿ.ಬಿ. ಚಂದ್ರೇಗೌಡ :— ಸರ್ಕಾರಕ್ಕೆ ಆ ವ್ಯಾಪ್ತಿ ಇಲ್ಲ. ಡಾ: ರಾಜ್ ಕುಮಾರ್ ಕೇಸ್ ಇಂಥಾದ್ದೇ ಒಂದು ಕಾರಣಕ್ಕಾಗಿ ಸರ್ವೋಚ್ಚ ನ್ಯಾಯಾಲಯದಲ್ಲಿ, ನಾವು ನೀವು ಎಲ್ಲಾ ಸೇರಿ ಹೋಗಿದ್ದ ತಮಗೆ ಗೊತ್ತಿದೆ. ಸರ್ಕಾರಕ್ಕೆ ಸರ್ವತಂತ್ರ ಸ್ವಾತಂತ್ರವೇನಿಲ್ಲ. ಆದ್ದರಿಂದ, ಇಂತಹ ಕೇಸುಗಳನ್ನು ತೀರ್ಮಾನ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದೇ ಈ ಫಾಸ್ಟ್ ಟ್ರಾಕ್ ಕೋರ್ಟ್‌ಗಳನ್ನು ಮಾಡಿರುವುದು.

ಕರ್ನಾಟಕ ಹಾಲು ಮಂಡಲಕ್ಕೆ ಬಂದ ಆದಾಯ.

(3109) ಶ್ರೀ ಶ್ರೀನಿವಾಸಗೌಡ ಕುದುವನಹಳ್ಳಿ (ಕೋಲಾರ) :— ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 2000-01ನೇ ಸಾಲಿನಿಂದ ಕಳೆದ 3 ವರ್ಷಗಳಲ್ಲಿ ಕರ್ನಾಟಕ ಹಾಲು ಮಹಾಮಂಡಳಿಗೆ ಪ್ರತಿವರ್ಷ ಬಂದಿರುವ ಆದಾಯವೆಷ್ಟು?

ಆ) ಯಾವ ಯಾವ ಸಂಸ್ಥೆಯಿಂದ ಎಷ್ಟೆಷ್ಟು ಆದಾಯ ಮಹಾ ಮಂಡಳಿಗೆ ಬಂದಿರುತ್ತದೆ?

ಇ) ಕಳೆದ 3 ವರ್ಷಗಳಿಂದ ಇಲ್ಲಿಯವರೆಗೆ ಕರ್ನಾಟಕ ಹಾಲು ಮಹಾಮಂಡಳಿಗಳಿಸಿದ ನಿವ್ವಳ ಲಾಭವೆಷ್ಟು?

ಈ) ಈ ನಿವ್ವಳ ಲಾಭದಲ್ಲಿ ಉಪ ನಿಯಮಗಳ ಪ್ರಕಾರ ಸದಸ್ಯರಿಗೆ ಲಾಭ ಶೇರು ಡಿವಿಡೆಂಡ್ ಪಾವತಿಸಲಾಗಿದೆಯೇ?

ಉ) ಪಾವತಿಸದಿದ್ದಲ್ಲಿ ಅದಕ್ಕೆ ಕಾರಣವೇನು?

ಶ್ರೀ ಎ. ಕೃಷ್ಣಪ್ಪ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) :—

ಅ) ಆದಾಯ (ನಿವ್ವಳ : ಲಾಭ)

(ಲಕ್ಷ ರೂ.ಗಳಲ್ಲಿ)

1998-99	1999-2000	2000-01
408.14	36.72	59.41